ಉದಯವಾಣಿ
ಐಸಿರಿ
ಸೋಮವಾರ 9 ಜುಲೈ 2012

ಕ್ಲಾಸ್ ಲೀಡರ್

ಹಿಸ್ಟರಿ ಎಂಬ ಹಳೆಯ ವಸ್ತು

ಇತಿಹಾಸ ಗೊತ್ತಿಲ್ಲದೇ ವರ್ತಮಾನ ಮತ್ತು ಭವಿಷ್ಯವನ್ನು ಕಟ್ಟಲು ಸಾಧ್ಯವಿಲ್ಲ, ನಿಜ. ಆದರೆ ಇತಿಹಾಸದ ದೊಡ್ಡಾಲದ ಮರಕ್ಕೆ ಜೋತು ಬೀಳುವುದರಿಂದಲೂ ಹೊಸ ಇತಿಹಾಸ ಬರೆಯಲ್ಪಡುವುದಿಲ್ಲ. ವೆಲ್ಚ್ ಪ್ರತಿಪಾದಿಸುತ್ತಿದ್ದುದೂ ಇದನ್ನೇ. ವೆಲ್ಚ್ ಬರುವುದಕ್ಕಿಂತ ಮೊದಲು ಕಂಪನಿಗಳ ಬೆಳವಣಿಗೆ ಅನ್ನುವುದಕ್ಕೆ ವ್ಯಾಖ್ಯಾನ 'ಆಂತರಿಕವಾದ ಬೆಳವಣಿಗೆ, ಅದೂ ಕಾಲಕ್ರಮೇಣವಾಗಿ'. ವೆಲ್ಚ್ ನಿರಾಕರಿಸಿದ. ಅವನ ಪ್ರಕಾರ ಅತ್ಯಧಿಕ ಬಿಜಿನೆಸ್ ಬೆಳವಣಿಗೆಗೆ ಹೇಗಾದರೂ ಕೆಲಸ ಮಾಡಬೇಕಾಗುತ್ತದೆ, ಕ್ರಮೇಣ ಸಾಧಿಸೋಣ ಎಂಬುದು ಅಸಾಧ್ಯ. ಅಷ್ಟೇ ಅಲ್ಲ, ಅದಕ್ಕಾಗಿ ಅವನು ನಂಬಿದ್ದು ಕೆಲಸಗಾರರ ಯೋಚನೆ, ಪ್ರತಿಭೆಗಳನ್ನು. ಅವನು 'ವರ್ಕ್‌ಔಟ್' ಎನ್ನುವ ಪದವನ್ನು ಸಿದ್ಧಾಂತದಂತೆ ಮಂಡಿಸಿದ. ಅಂದರೆ ಯೋಚಿಸಿ, ಅದನ್ನು ಯೋಜನೆ ರೂಪಕ್ಕೆ ತರಲು ವರ್ಕ್‌ಔಟ್ ಬಹಳ ಮುಖ್ಯ ಅಂತ ಅವನ ಪ್ರತಿಪಾದನೆ. ವರ್ಕೌಟ್ ಪದ, ಕೆಲಸಗಾರರ ಜಡ್ಡುಗಟ್ಟಿದ ಮನಸ್ಸು, ದೇಹವನ್ನು ಹುರಿಗೊಳಿಸಿಬಿಟ್ಟಿತು.

ವೆಲ್ಚ್ ಹೇಳುತ್ತಿದ್ದ: 'ಹೆಚ್ಚಿನ ಕಂಪನಿಗಳಲ್ಲಿ ಗಡಿ ಹಾಕಿಕೊಂಡು, ಲಕ್ಷ್ಮಣರೇಖೆ ಎಳೆದುಕೊಂಡು ಯುದ್ಧ ಮಾಡುವ, ಅಸಂಗತವಾದ ವಿಚಾರಗಳಲ್ಲೇ ಕಾಲ ಕಳೆಯುವ ಮನಸ್ಥಿತಿ ಇದೆ. ಅಂಥ ಅಸಂಗತ ಸಂಗತಿಗಳ ಜೊತೆಗಿನ ಗುದ್ದಾಟದಿಂದ ಹೊರಬಂದ ಉತ್ಪನ್ನವೇನು ಅಂತ ಗೊತ್ತು, ಅದೆಷ್ಟು ವೇಸ್ಟ್ ಅಂತಲೂ ಗೊತ್ತು. ಈ ವರ್ಕೌಟ್ ಎನ್ನುವ ಪದದಿಂದ, ಪ್ರಾಕ್ಟಿಕಲ್ ಆಗಿ ದುಡಿಯುತ್ತಾ ಹೊಸದೇನನ್ನಾದರೂ ಸಾಧಿಸೋಣ'.

ಮುಂದಿನ ವಾರ: ನಮ್ಮ ಪ್ರಾಡಕ್ಟ್‌ನ ಗುಣದ ಮಟ್ಟ

(29 ಲೀಡರ್‌ಶಿಪ್‌ ಸೀಕ್ರೆಟ್ಸ್ ಫ್ರಮ್ ಜಾಕ್ ವೆಲ್ಚ್ ಪುಸ್ತಕದಿಂದ)

ನಿಮ್ಮನೆ ಅನ್ನಪೂರ್ಣೇಶ್ವರಿಗೆ ಸಾವಯವ ಚಿನ್ನ

ದೇಸೀ ಅಕ್ಕಿ

ನಗರ ಪ್ರದೇಶಗಳಲ್ಲಿ ಈಗ ದೇಸಿ ಜಪ ಶುರುವಾಗಿದೆ. ಇದರಿಂದ ಒಂದಷ್ಟು ರೈತರಿಗೆ ಲಾಭವೂ ಆಗುತ್ತಿದೆ. ಎಲ್ಲರ ನಾಲಿಗೇನೂ ಹೈಬ್ರಿಡ್ ಅಕ್ಕಿಗೆ ಕಲಾಯಿ ಆಗಿರುವಾಗ ಮನಸ್ಸು ದೇಸಿಕಡೆ ಎಳೆಯುತ್ತಿದೆ. ಅದಕ್ಕೆ ದೇಸಿಯೇ ಒಂದು ಬ್ರಾಂಡ್, ವ್ಯವಹಾರ. ಇದನ್ನು ಮುಂದಿಟ್ಟುಕೊಂಡು ಲಾಭ ಮಾಡುವವರೂ ಇದ್ದಾರೆ. ಇದರಿಂದ ಗ್ರಾಹಕರಿಗೆ ಏನು ಲಾಭ?

■ ಕಟ್ಟೆ ಗುರುರಾಜ್

ದೇಸಿ ಅಕ್ಕಿಯ ಊಟ ಮಾಡಿದರೆ ಆರೋಗ್ಯಕ್ಕೆ ಒಳ್ಳೆಯದು. ರತ್ನಚೂಡಿ ಅಕ್ಕಿಯ ಅನ್ನ ಘಮ, ಘಮ. ಕರಿಗಜವಲಿ ತಿಂದರೆ ಬಾಣಂತಿಯರಿಗೆ ಒಳ್ಳೆಯದು. ಈ ಅಕ್ಕಿಯ ಪಾಯಸ ಕುಡಿದರೆ ವರ್ಷಪೂರ್ತಿ ರುಚಿ ನಾಲಿಗೆಯ ಮೇಲಿರುತ್ತದೆ. ಕರಿಭತ್ತ ಸರ್ಪಸುತ್ತಿಗೆ ಒಳ್ಳೆಯದು, ಗ್ಯಾಸ್ಟ್ರಿಕ್ ಇರೋಲ್ಲ; ಅನಾರೋಗ್ಯ ಬರೋಲ್ಲ.

–ಹೀಗೆ ದೇಸಿ ಅಕ್ಕಿಗಳ ಬಗ್ಗೆ ಪುಂಖಾನುಪುಂಖ ರುಚಿಕಟ್ಟಾದ ವಿವರಗಳು ಸಿಗುತ್ತವೆ. ಇವನ್ನೆಲ್ಲಾ ತಿಳಿದ ಮೇಲೆ ಹೆಮ್ಮೆ ಅನಿಸುತ್ತದೆ. ' ನಮ್ಮ ಹಿರಿಯರು ಅದೇನು ತಿಂತಾಯಿದ್ದರು ನೂರು ವರ್ಷ ಬದುಕುಲಿಕ್ಕೆ ?' ಅನ್ನೋ ಗುಟ್ಟಿನ ಸಿಪ್ಪೆಯನ್ನು ಈ ದೇಸೀ ಅಕ್ಕಿಗಳು ಸುಲಿಯುತ್ತವೆ. ಹಾಗಂತ ಮನೆಯ ಪಕ್ಕದ ಅಂಗಡಿಗೆ ಹೋಗಿ ಗಂಧ ಸಾಲೆ, ಕೆಂಪು ಅಕ್ಕಿ, ರಾಜಮುಡಿ ಕೊಡಿ ಅಂಥ ಕೇಳಿಬಿಟ್ಟೀರಿ. ಅಂಗಡಿಯವ ದಂಗಾದಾನು ಜೋಕೆ.

ಮತ್ತೆ ಎಲ್ಲಿ ಸಿಗುತ್ತವೆ? ಎಲ್ಲಿ ಇದರ ಮಂಡಿ/ಮಾರ್ಕೆಟ್? ಎಲ್ಲವೂ ಮಿಲಿಯನ್ ಡಾಲರ್ ಪ್ರಶ್ನೆ. ಕೃಷಿ ಇಲಾಖೆಯವರನ್ನು ಕೇಳಿದರೂ ಬೆವತು ಹೋಗುತ್ತಾರೆ. ಇವರಿಗೆ ರಾಜ್ಯದಲ್ಲಿ ಎಷ್ಟು ಜನ ರೈತರು ಸಾವಯವ ಕೃಷಿ ಮಾಡುತ್ತಿದ್ದಾರೆ, ಎಷ್ಟು ಎಕರೆಯಲ್ಲಿ ಭತ್ತ ಬೆಳೀತಾರೆ ಅಂತ ಕೇಳಿದರೆ ಮುಖ ಬಾಡುತ್ತದೆ. 'ಇಲ್ಲ ಡಾಕ್ಯುಮೆಂಟೇಷನ್ ಆಗಬೇಕು. ಇನ್ನೂ ಆ ಕೆಲಸ ನಡೀತಿದೆ. ನೀವು ಇಲ್ಲಿ ಕೇಳಿ, ಅಲ್ಲಿ ಕೇಳಿ' ಅಂದು ಕೈ ತೊಳೆದುಕೊಳ್ಳುತ್ತಾರೆ.

ವಾಸ್ತವ ಎಂದರೆ ಎಲ್ಲೂ ದೇಸಿ ಪದಾರ್ಥಕ್ಕೆ ಅಂತ ಪ್ರತ್ಯೇಕ ಮಾರ್ಕೆಟ್ ಇಲ್ಲ. ದೇಸಿ ಪದಾರ್ಥಗಳು ಬೇಕು ಎಂದರೂ ಒಂದೇಸೂರಿನಲ್ಲಿ ಸಿಗುವುದು ಕಷ್ಟ. ಬೆಂಗಳೂರಲ್ಲಿ ಸುಮಾರು 25–30 ಖಾಸಗಿ ಮಳಿಗೆಗಳಿವೆ. ಇಡೀ ರಾಜ್ಯದಲ್ಲಿ ಗುಡ್ಡೆ ಹಾಕಿದರೆ 40–50 ಇರಬಹುದು. ಎಲ್ಲವೂ ಅಸಂಘಟಿತ. ದೇಸಿ ಪದಾರ್ಥಗಳ ಊಟ ಮಾಡುವ ಹೊಸ ಟ್ರೆಂಡ್ ಶುರುವಾದ ಮೇಲೆ ಎಗ್ಗಿಲ್ಲದೆ ಮಳಿಗೆಗಳ ಹುಟ್ಟುತ್ತಿವೆ.

ಬೆಲೆ ಜಾಸ್ತಿ

ದೇಸಿ ಅಕ್ಕಿ ಆರೋಗ್ಯಕ್ಕೆ ಒಳ್ಳೆಯದು ಅನ್ನೋದೇನೋ ನಿಜ. ಆದರೆ ಇದರ ಬೆಲೆ ತುಸು ಹೆಚ್ಚೇ. ಹೈಬ್ರೀಡ್ ಅಕ್ಕಿಗಳಿಗಿಂತ ಶೇ. 25–30ರಷ್ಟು ಹೆಚ್ಚು. ಅಂದರೆ ಕೆ.ಜಿಗೆ 40ರೂ. ದಾಟುತ್ತದೆ. ರಾಜಮುಡಿ, ರತ್ನ ಚೂಡಿಗಳೆಲ್ಲಾ ಹೈಬ್ರಿಡ್ ಸೋನಾ ಮಸೂರಿಗಿಂತ ಒಂದು ಕೈ ಮೇಲೇ. ಇದು ಗ್ರಾಹಕರ ಪಾಲಿಗೆ ಬಿಸಿ ತುಪ್ಪ. 'ಒಳ್ಳೇ ಆರೋಗ್ಯಕ್ಕೆ 10 ರೂ. ಜಾಸ್ತಿ ಕೊಡಕ್ಕಾಗಲ್ವಾ' ಅಂತ ಕೇಳಬಹುದು. ಆದರೆ ಮಾಸ್ ಮೆಂಟಾಲಿಟಿ ಬೇರೆ. ಯಾವುದು ಕಡಿಮೆಗೆ ಸಿಗುತ್ತದೆ ಅದಕ್ಕೆ ಮೊದಲ ಮಣೆ.

'ಸಹಜ ಸಮೃದ್ಧ' ಸಾವಯವ ಸಂಸ್ಥೆಯ ಶಾಂತ ಕುಮಾರ್ ಹೇಳುವುದು ಹೀಗೆ: 'ಅಕ್ಕಿಯ ರೇಟು ಜಾಸ್ತಿ ಆಗೋಕ್ಕೆ ಸಾಗಾಣಿಕ ವೆಚ್ಚವೂ ಕಾರಣ. ರೈತರಿಂದ ಕೊಂಡು, ತರುವುದಕ್ಕೆ ಹೆಚ್ಚೂ ಕಡಿಮೆ 7–8ರೂ. ಖರ್ಚು ಬರುತ್ತದೆ. ಪ್ಯಾಕಿಂಗ್ ಮಾಡಿ ಗ್ರಾಹಕರ ಕೈಗೆ ಇಡುವಷ್ಟರಲ್ಲಿ ಇನ್ನಷ್ಟು ಖರ್ಚು ಜಮೆಯಾಗುತ್ತದೆ. ನಾವೂ ಶೇ. 10–15ರಷ್ಟು ಕಡಿಮೆ ಮಾಡುವ ನಿಟ್ಟಿನಲ್ಲಿ ಯೋಜನೆ ಹಾಕಿ ಕೊಂಡಿದ್ದೇವೆ'.

ಹೌದು, ದೇಸಿ ಅಕ್ಕಿಗಳು ರಾಜ್ಯದ ಅಷ್ಟೂ ಕಡೆ ಹರಡಿಕೊಂಡಿವೆ. ಉದಾಹರಣೆಗೆ– ಉತ್ತರ ಕನ್ನಡದಲ್ಲಿ 60 ತಳಿ– ಶಿವಮೊಗ್ಗ ಸುತ್ತಮುತ್ತ 100 ತಳಿಗಳಿವೆ. ಹಾಸನದ ಕಡೆ ರಾಜಮುಡಿ, ರಾಜಭೋಗ, ಕ್ಯಾಸಕ್ಕಿ, ಚಿಕ್ಕಮಂಗಳೂರು ಕಡೆ ದಬ್ಬಣಸಾಲಿ, ಹೊಳೆಸಾಲು ಚಿಟ್ಟಿಗ, ಗಮ್‌ಸಾಲೆ, ಆಲೂರು ಸಣ್ಣ, ಧಾರವಾಡದ ಕಡೆ ಕಾಗಿಸಾಳಿ, ಕರಿಗಜವಲಿ, ಅಂತರಸಾಲಿ– ಬೆಳಗಾಂನಲ್ಲಿ ಅಂಬಿಮೊಹರ್, ಕರಿಕಗಜವಲಿ, ಉತ್ತರ ಕನ್ನಡದ ಕಡೆ ಕಾರವಾರ ಕಗ್ಗ, ಸಣ್ಣಕ್ಕಿ ಭತ್ತ. ಮೈಸೂರು ಕಡೆ ರತ್ನಚೂಡಿ, ಮೈಸೂರು ಮಲ್ಲಿಗೆ, ಸೇಲಂ ಸಣ್ಣ, ಮಂಗಳೂರು ಪ್ರಾಂತ್ಯದಲ್ಲಿ ಕಳಮೆ ಗಂಧ ಸಾಲೆ, ಬೆಂಗಳೂರು ಸುತ್ತಮುತ್ತ ಸಣ್ಣ ಮುಂಡಗ, ಕೆಂಪು ಮುಂಡಗ, ದೊಡ್ಡ ಬೈರನೆಲ್ಲು ಹಾಗೂ ಬೀದರ್ ಗುಲ್ಬರ್ಗದಲ್ಲಿ ಕರಿಕಳವಿ ಇವೆ.

ಪರಿಸರ ತಜ್ಞ ಶಿವಾನಂದ ಕಳವೆ ಅವರು ಹೇಳುವ ಪ್ರಕಾರ ರಸ್ತೆಗಳಿಲ್ಲದ, ಯಾರೂ ಸುಲಭವಾಗಿ ಹೋಗಲು ಆಗದ ಕಡೆ ಭತ್ತದ ತಳಿಗಳಿವೆ. ಅವರು ಯಾರೂ ಕೂಡ ಹೈಬ್ರೀಡ್‌ಗೆ ಒಗ್ಗಿಲ್ಲ. ಬುಕಾನನ್ ವರದಿಯಲ್ಲಿ ಹೇಳಿರುವಂತೆ ಭಟ್ಕಳದಿಂದ ಚಿತ್ತಾಕುಲವರೆಗೆ 24 ತಳಿಗಳು ಶತಮಾನಗಳಿಂದ ಹಾಗೇ ಇದೆ. ಕರಿಕಗ್ಗ, ಬಿಳಿ ಕಗ್ಗ, ಹಕ್ಕಲ ಸಾಲೆ, ಸಣ್ಣ ಭತ್ತಗಳು ಇವೆ. ಇವುಗಳನ್ನು ಸಂರಕ್ಷಿಸಿ ಎಂದು ಯಾರೂ ಇವರಿಗೆ ಭಾಷಣ ಮಾಡಿಲ್ಲ. ದೇಸಿ ಭತ್ತವೇ ಇವರ ಜೀವನ. ಭತ್ತದ ಮಹತ್ವ, ರೈತ ಕಾಳಜಿ ಎಷ್ಟಿದೆ ಎನ್ನುವದನ್ನು ಹುಡುಕಾಟ ನಡೆಸಿದರೆ ಒಳ್ಳೆಯದು.

ಹೀಗೆ ಇಡೀ ರಾಜ್ಯವನ್ನು ಹಂಚಿ ಹೋಗಿರುವ ದೇಸಿ ಭತ್ತಗಳನ್ನು, ಅಕ್ಕಿ ಮಾಡಿಸಿ ನೂರಾರು ಕಿ.ಮೀ ತಂದು ಮಾರುವುದು ಕಷ್ಟವೇ. ಇಂಥ ಕೆಲಸ ಸರ್ಕಾರ ಮಾಡಬೇಕಿತ್ತು. ಅದು ಕೇವಲ ದೇಸಿ ಜಪಕ್ಕಷ್ಟೇ ಸೀಮಿತವಾಗಿದೆ. ಸಾವಯವ ಕೃಷಿ ಮಿಷನ್ ಸ್ಥಾಪಿಸಿ ಆ ಆಸೆಯನ್ನು ಸರ್ಕಾರ ಚಿಗುರಿಸಿತ್ತು. ಆದರೆ ಅದು ಕಮರಿ ಹೋಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಇದರಲ್ಲಿ ಮಹತ್ವವಾದ ಯೋಜನೆ ಇತ್ತು, ಪ್ರತಿ ತಾಲೂಕಿನಲ್ಲಿ ದೇಸಿ ಮಳಿಗೆ ಪ್ರಾರಂಭಿಸಬೇಕು ಎನ್ನುವುದು. ನಿಜಕ್ಕೂ ಇದು ಕಾರ್ಯಗತವಾಗಿದ್ದರೆ ದೇಸಿ ಪದಾರ್ಥಗಳು ಗ್ರಾಹಕರನ್ನು ಬಲುಬೇಗ, ಕಡಿಮೆ ಬೆಲೆಯಲ್ಲಿ ತಲುಪಬಹುದಾಗಿತ್ತು. ಈಗ ಸಾವಯವ ಮಿಷನ್ ಯಂತ್ರವಿಲ್ಲದ ಇಲ್ಲದ ಗಾಡಿಯಾಗಿದೆ. 60 ಸಾವಿರ ರೈತರನ್ನು ವಿಧಾನಸೌಧದ ಬಳಿ ಕರೆದುಕೊಂಡು ಬಂದು ಸಾವಯವ ಜಪ ಮಾಡಿಸಿದ್ದೇ ದೊಡ್ಡ ಸಾಧನೆ. ದುರಂತ ಎಂದರೆ ಸಾವಯವ ಪದಾರ್ಥಗಳನ್ನು ಗ್ರಾಹಕರಿಗೆ ತಲುಪಿಸುವ ಮಹತ್ವದ ಕೆಲಸವನ್ನ ಮಾಡಬೇಕಾದ ಮಿಷನ್‌ನಲ್ಲಿದ್ದವರೇ ಈಗ ಮಳಿಗೆಗಳನ್ನು ತೆರೆದು ಮಾರಾಟಕ್ಕೆ ಕೂತಿದ್ದಾರೆ.

ನಮ್ಮ ನೆಲದ ಕೂಸಿಗೆ ಹೆಚ್ಚಿನ ಬೆಲೆ

ದೇಸಿ ಅಕ್ಕಿಗಳು ನಮ್ಮ ನೆಲದ ಕೂಸುಗಳು. ಪ್ರದೇಶ, ಹವಾಮಾನ ಅನುಗುಣವಾಗಿ ಹುಟ್ಟಿದವು. ಇತಿಹಾಸ ಹೇಳುವ ಪ್ರಕಾರ ನಮ್ಮಲ್ಲಿ ಸುಮಾರು 1.5ಲಕ್ಷ ಭತ್ತದ ತಳಿಗಳು ಇತ್ತು. ಇದರಲ್ಲಿ ಈಗ ಉಳಿದಿರುವುದು ಕೇವಲ 32 ಸಾವಿರ. ಬಳಕೆಯಲ್ಲಿರುವುದು ಕೇವಲ 300 ತಳಿಗಳು. ಕಮರ್ಷಿಯಲ್ ತಳಿಗಳು ಕೇವಲ 40 ಇರಬಹುದು. ಇದರಲ್ಲೂ ಪಾಪ್ಯುಲರ್ ತಳಿ ಎಂದರೆ ರಾಜಮುಡಿ, ಗಂಧಸಾಲೆ, ರಾಜಭೋಗ, ಎಚ್‌ಎಂಟಿ, ಮೈಸೂರು ಮಲ್ಲಿಗೆ, ಬರ್ಮಬ್ಲಾಕ್. ರತ್ನಚೂಡಿ, ಸಣ್ಣವಾಳ್ಯ, ನವರ, ಜೋಳಗ, ಕರಿಗಜವಲಿ, ಕರಿಜಡ್ಡು, ಚಿನ್ನಪೊನ್ನಿ, ಕೆಂಪಕ್ಕಿಯಲ್ಲಿ 15 ವೆರೈಟಿಗಳಿವೆ.

ನಮ್ಮ ರಾಜ್ಯದಲ್ಲಿ ಸಾವಯವ ಅಕ್ಕಿಯ ಉತ್ಪಾದನೆ ಎಷ್ಟು, ಎಷ್ಟು ಜನ ರೈತರು ಇದರಲ್ಲಿ ತೊಡಗಿಕೊಂಡಿದ್ದಾರೆ ಎನ್ನುವುದರ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಆದರೆ ಬನವಾಸಿ ಭತ್ತವನ್ನು ಉಳಿಸಿ, ಕಗ್ಗ ಭತ್ತವನ್ನು ಬೆಳೆಸಿ ಎಂದು ಕೈ ಕೆಸರು ಮಾಡಿ ಕೊಳ್ಳದವರು ಭಾಷಣ ಬಿಗಿಯುತ್ತಾರೆ.

ಪುಟ 3

ಚಿತ್ರಗಳು- ಕೃಷ್ಣಕುಮಾರ್, [illegible]

ಅಕ್ಕಿಯಿಂದ ಆರೋಗ್ಯ

ಅತಿ ಹೆಚ್ಚಿ ಪ್ರೋಟೀನ್ ಇರುವ ಅಕ್ಕಿ ಎಂದರೆ ಎನ್‌ಜವರ. ಇದರಲ್ಲಿ ಶೇ. 8.12ರಷ್ಟಿದೆ. ರಾಜಮುಡಿಯಲ್ಲಿ 7.80ರಷ್ಟಿದೆ. ಕ್ಯಾಲ್ಷಿಯಮ್ ಎನ್‌ಜವರದಲ್ಲಿ 0.42 ಇದೆ.

ಕರಿಕಳವೆ, ರಾಜಮುಡಿ ಎಲ್ಲದರಲ್ಲೂ ಕೊಬ್ಬಿನ ಅಂಶ ಕಡಿಮೆ. ಹೆಚ್ಚೆಂದರೆ 2.5ರಷ್ಟಿರುತ್ತದೆ. ಅಂಕುರ್ ಸೋನಾದಲ್ಲಂತೂ 0.15 ಮಾತ್ರ. ನವರದಲ್ಲಿ ಕಬ್ಬಿಣ ಅಂಶ 1.2 ಇರುವುದರಿಂದ ಆರೋಗ್ಯಕ್ಕೆ ಬಹಳ ಒಳ್ಳೆಯದು. ಕಳಮೆ ಅಕ್ಕಿ ಫೈಲ್ಸ್‌ಗೆ ಬಹಳ ಒಳ್ಳೆಯದು.

ಆಹಾರ ತಜ್ಞ ಕೆ.ಸಿ. ರಘು ಹೇಳ್ತಾರೆ– ಕುಕ್ಕರ್ ಜಾಸ್ತಿ ಕೂಗಿದರೆ ಬೇಸರ ಮಾಡಿ ಕೊಳ್ತಾರೆ. ನಿಜ ಗೊತ್ತಾ? ಜಾಸ್ತಿ ಕೂಗಿದರೆ ಅದರಲ್ಲಿ ಪೋಶಕಾಂಶ ಹೆಚ್ಚಿದೆ ಅಂತರ್ಥ. ದೇಸಿ ಅಕ್ಕಿ ಆರೋಗ್ಯ ಏಕೆ ಎಂದರೆ ಅದು ರಕ್ತಕ್ಕೆ ಸಕ್ಕರೆ ಅಂಶವನ್ನು ಬೇಗ ಕಳಿಸುವುದಿಲ್ಲ. ಹೈಬ್ರಿಡ್ ಅಕ್ಕಿ ಆಗಲ್ಲ. ತಿಂದ ತಕ್ಷಣ ರಕ್ತಕ್ಕೆ ಕಳುಹಿಸುತ್ತದೆ. ಚರಕಸಂಹಿತೆಯಲ್ಲಿ ಒಂದೊಂದು ರೋಗಕ್ಕೂ ಒಂದೊಂದು ಅಕ್ಕಿ ಗುರುತಿಸಿದ್ದಾರೆ. ಕೇರಳದಲ್ಲಿ ನವರಖಿಣೆ ಅಕ್ಕಿಯನ್ನು ಪೇಸ್ಟ್ ಮಾಡಿ ಗಂಟು, ಮಂಡಿ ನೋವಿಗೆ ಹಚ್ಚುತ್ತಾರೆ. ನಮ್ಮ ದೇಸಿ ಅಕ್ಕಿ ತಾಕತ್ತು ನೋಡಿ ಹೇಗಿದೆ.

ರತ್ನಸಾಲಿ– ತಿಂದರೆ ಶೀಘ್ರ ನಿಧಾನವಾಗಿ ಜೀರ್ಣ ಆಗುತ್ತದೆ. ಅಮಾಯಲೋಸ್ ಅಂಶ ಇರುತ್ತದೆ. ನಾರಿನ ಅಂಶ ಶೇ.14–15 ಇರುತ್ತೆ. ಬೇರೆ ಅಕ್ಕಿಗಳಲ್ಲಿ ನಾರಿನ ಅಂಶ 5–6 ಮಾತ್ರ. ಇದರಿಂದ ರೋಗ ನಿರೋಧಕ ಶಕ್ತಿ ಹೆಚ್ಚು. ಕೆಂಪು ಭತ್ತದಲ್ಲಿ ಆ್ಯಂಟಿ ಆ್ಯಕ್ಸಿಡೆಂಟ್‌ಗಳಿವೆ- ದೇಹದಲ್ಲಿ ವಿಷಾಂಶಗಳನ್ನು ಸೇರಲು ಇವು ಬಿಡುವುದಿಲ್ಲ. ಅದಕ್ಕೆ ನೋಡಿ ನೀವು ಎಷ್ಟೇ ಪಾಲೀಶ್ ಮಾಡಿದರೂ ಕೆಂಪಕ್ಕಿಯಿಂದ ಬಣ್ಣವನ್ನು ಬೇರ್ಪಡಿಸಲು ಆಗಲ್ಲ.

ದೊಡ್ಡ ಭತ್ತದ ಅಕ್ಕಿಯಲ್ಲಿ–ವಿಟಮಿನ್ ಬಿ ಜಾಸ್ತಿ. ನಾವು ದೇಸಿ ತಳಿಗಳ ಮೌಲ್ಯ, ಅದರ ಮಹತ್ವ ತಿಳಿಯಬೇಕು. ಭಾಷೆ ನಶಿಸಿ ಹೋದರೆ ಏನಾಯ್ತು? ಅನ್ನೋಜನ ಇದ್ದಾರೆ. ಭಾಷೆ ಹೋದರೆ ಒಂದು ಜನಾಂಗ, ಸಂಸ್ಕೃತಿ ಕಾಣೆಯಾದಂತೆ. ದೇಸಿ ಭತ್ತ ಹೋದರೂ ಅಷ್ಟೇ. ಸಂಸ್ಕೃತಿ, ಜನಾಂಗದ ಜೊತೆಗೆ ಆರೋಗ್ಯವೂ ಹೋದಂತೆ.

ಕ್ರಾಸ್ ರೋಡಲ್ಲಿ ಕಾಸು

ಗಲ್ಲಿ ATM

ಬ್ಯಾಂಕಿನ ಹೆಸರಿಲ್ಲ. ಬ್ಯಾಂಕಿಗೂ ಅದಕ್ಕೂ ಸಂಬಂಧವೇ ಇಲ್ಲ. ಯಾರದೋ ದುಡ್ಡು, ಯಾರದೋ ಎಟಿಎಂ. ಅದು ಹೆಸರಿಲ್ಲದ ಬೋರ್ಡಿಲ್ಲದ ವೈಟ್ ಲೇಬಲ್ ಎಟಿಎಂ. ಸಿಮ್ ಕಾರ್ಡು ಸಿಗೋ ಹಾಗೆ, ಹಳ್ಳೀಲಿ ಗಲ್ಲೀಲಿ ಕಾಸು ತೆಗೆಯೋ ಹಾಗಿದ್ರೆ ಹೇಗೆ? ಅದೀಗ ನಿಜವಾಗುತ್ತಿದೆ.

■ ಜೆ. ಸುಬ್ರಹ್ಮಣ್ಯ

ಬ್ಯಾಂಕ್‌ಗಳು ಖಾಸಗೀಕರಣಗೊಂಡಿದ್ದಾಯ್ತು. ವಿಮಾ ಕ್ಷೇತ್ರ, ವಿಮಾನಯಾನ ಎಲ್ಲವೂ ಖಾಸಗೀಕರಣದ ತೆಕ್ಕೆಗೆ ಬಂದು ಬಿದ್ದಿದ್ದಾಯ್ತು. ಇದೀಗ ಬೇಕೆಂದಾಗ ಹಣ ಕೊಡುವ ಎಟಿಎಂಗಳ ಸರದಿ. ಹೌದು. ಇನ್ನು ನಮ್ಮೂರಿನ, ನಿಮ್ಮೂರಿನ ಸಣ್ಣ ಗಲ್ಲಿಗಳಲ್ಲೂ ಎಟಿಎಂಗಳು ತಲೆ ಎತ್ತಲಿವೆ. ದೊಡ್ಡ ನಗರಗಳಲ್ಲಿ ಮಾತ್ರ ಗಲ್ಲಿಗೆ ನಾಲ್ಕರಂತೆ ಸಿಗುತ್ತಿದ್ದ ಎಟಿಎಂಗಳು ಇನ್ನು ಸಣ್ಣಪುಟ್ಟ ಊರುಗಳ ಗಲ್ಲಿಗಲ್ಲಿಗಳಿಗೂ ಕಾಲಿಡಲಿವೆ. ಕೇಳಿದವರಿಗೆ ಕೇಳಿದಾಕ್ಷಣ ಬಯಸಿದಷ್ಟು ಹಣ ಬಸಿದು ಕೊಡಲಿದೆ.

ಹೌದು. ಇಂತಹೊದ್ದಂದು ಕ್ರಾಂತಿಕಾರಿಕ ಬದಲಾವಣೆಗೆ ಇದೀಗ ಭಾರತ ತೆರೆದುಕೊಂಡಿದೆ. ಇದುವರೆಗೆ ಬ್ಯಾಂಕ್‌ಗಳು ಮಾತ್ರ ಎಟಿಎಂಗಳನ್ನು ಸ್ಥಾಪಿಸುವ ಅವಕಾಶ ಹೊಂದಿದ್ದವು. ಇದೀಗ ಈ ಅವಕಾಶವನ್ನು ಖಾಸಗೀ ಕಂಪನಿಗಳಿಗೂ ನೀಡಿ ಭಾರತೀಯ ರಿಸರ್ವ್ ಬ್ಯಾಂಕ್ ಆದೇಶ ಹೊರಡಿಸಿದೆ. ಹೀಗಾಗಿ ಇನ್ನು ಎಟಿಎಂ ಸ್ಥಾಪನೆ ಕೂಡಾ ಒಂದು ಉದ್ಯಮದ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆ ಕಾಣುತ್ತಿದೆ. ಅದು ಕೂಡಾ ಲಕ್ಷಾಂತರ ಜನರಿಗೆ ಉದ್ಯೋಗ ದೊರಕಿಸಿಕೊಡುವ ಹೊಸ ಉದ್ಯಮವಾಗಿ ಉದಯವಾಗುವ ಎಲ್ಲಾ ಲಕ್ಷಣಗಳೂ ಗೋಚರಿಸಲಿವೆ. ಇನ್ನು ಕೆಲವೇ ದಿನಗಳಲ್ಲಿ ದೇಶದ ಮೂಲೆ ಮೂಲೆಗಳಲ್ಲೂ ವೈಟ್‌ಲೇಬಲ್ ಎಟಿಎಂಗಳು ತಲೆ ಎತ್ತಲಿವೆ.

ವೈಟ್ ಲೇಬಲ್ ಎಟಿಎಂಗಳೆಂದರೇನು?

ಇವು ಕೂಡಾ ಸಾಮಾನ್ಯ ಎಟಿಎಂಗಳೇ. ಆದರೆ ಈ ಎಟಿಎಂಗಳನ್ನು ಬ್ಯಾಂಕ್‌ಗಳು ನೇರವಾಗಿ ಸ್ಥಾಪಿಸುವುದಿಲ್ಲ. ಬದಲಾಗಿ ಬ್ಯಾಂಕ್‌ಗಳ ಅನುಮತಿಯೊಂದಿಗೆ ಖಾಸಗೀ ಸಂಸ್ಥೆಗಳು ಸ್ಥಾಪನೆ ಮಾಡುತ್ತವೆ. ಬ್ಯಾಂಕ್‌ಗಳು ಸ್ಥಾಪಿಸಿರುವ ಎಟಿಎಂಗಳು ಏನೆಲ್ಲಾ ಸೇವೆ ಒದಗಿಸುತ್ತವೆಯೋ ಅಷ್ಟೇ ಅಥವಾ ಅದಕ್ಕಿಂತ ಇನ್ನೂ ಸ್ವಲ್ಪ ಹೆಚ್ಚೇ ಸೇವೆಯನ್ನು ಇವು ಒದಗಿಸುತ್ತವೆ. ಈ ಎಟಿಎಂಗಳ ಮೇಲೆ ಯಾವುದೇ ಬ್ಯಾಂಕಿನ ಹೆಸರಾಗಲೀ, ಚಿಹ್ನೆಯಾಗಲೀ ಇರುವುದಿಲ್ಲ. ಹೀಗಾಗಿ ಇವುಗಳನ್ನು ವೈಟ್ ಲೇಬಲ್ ಎಟಿಎಂಗಳೆಂದು ಕರೆಯಬೇಕಾಗುತ್ತದೆ.

ಖಾಸಗಿ ಕಂಪನಿಗಳಿಗೇಕೆ ಈ ಅವಕಾಶ?

ಸರ್ಕಾರಿ ಮತ್ತು ಖಾಸಗೀ ಬ್ಯಾಂಕ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಎಟಿಎಂಗಳನ್ನು ಸ್ಥಾಪನೆ ಮಾಡುತ್ತಿವೆಯಾದರೂ ಅವುಗಳು ಮುಖ್ಯವಾಗಿ ಗಮನ ಹರಿಸಿರುವುದು ಕೇವಲ ಮೆಟ್ರೋ ಮತ್ತು ಎರಡನೇ ಹಂತದ ನಗರಗಳ ಕಡೆಗೆ ಮಾತ್ರ. ಅಂದರೆ ಜನಸಂಖ್ಯೆ ಹೆಚ್ಚಿರುವ ಕಡೆ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಹಣ ಓಡಾಡುವ ನಗರಗಳಲ್ಲಿ ಮಾತ್ರ. ಉಳಿದ ಕಡೆ ಅವುಗಳಿಗೆ ಸಾಕಷ್ಟು ಅವಕಾಶ ಇದೆಯಾದರೂ ಅವು ಅತ್ತ ಗಮನ ಹರಿಸಿಲ್ಲ.

ಪುಟ 3

ಭಾರತದಲ್ಲಿ ಕಾರ್ಡ್ ಬಳಕೆ

24 ಕೋಟಿ ಡೆಬಿಟ್ ಕಾರ್ಡ್

2 ಕೋಟಿ ಕ್ರೆಡಿಟ್ ಕಾರ್ಡ್

ಯಾವ ದೇಶದಲ್ಲಿ ಎಷ್ಟು ಎಟಿಎಂ?

ದೇಶ	ಎಟಿಎಂ
ಅಮೆರಿಕ	50 ಲಕ್ಷ
ಚೀನಾ	25 ಲಕ್ಷ

ಮೈಗೆಲ್ಲ ಎಣ್ಣೆ ಹಚ್ಚಿಕೊಂಡಿರುವವನೇ ಬಾಸ್



ಮ್ಯಾನೇಜ್‌ಮೆಂಟ್ ಕತೆಗಳು

■ ಸೀಮ

ದಟ್ಟ ಕಾಡು. ಅಲ್ಲೊಂದು ಮೊಲ ಹಾಗೂ ಹಾವು. ಇಬ್ಬರೂ ಅನಾಥರು. ಸುಮ್ಮನೆ ಅಂಡಲೆಯುತ್ತ, ಬಾಯಿಗೆ ಸಿಕ್ಕಿದ್ದನ್ನು ತಿಂದುಕೊಂಡಿದ್ದವು. ಮಾಡಲು ಕೆಲಸವೇನೂ ಇರಲಿಲ್ಲ.

ಕಾಕತಾಳೀಯ ಎಂಬಂತೆ ಇಬ್ಬರೂ ಹುಟ್ಟಿನಿಂದಲೇ ಕುರುಡರು. ಒಂದು ದಿನ ಮೊಲ ಕಾಡಿನಲ್ಲಿ ಓಡಾಡುತ್ತಿದ್ದಾಗ ಹಾವಿಗೆ ಎಡವಿ ಬಿದ್ದುಬಿಟ್ಟಿತು. ಸಹಜವಾಗಿಯೇ ಹಾವಿಗೊಂದು ಸಣ್ಣ ಶಾಕ್.

'ಐಯಾಮ್ ಸಾರಿ. ನೀನಿರುವುದು ತಿಳಿಯಲೇ ಇಲ್ಲ. ನನಗೆ ಹುಟ್ಟಿನಿಂದಲೇ ಕಣ್ಣು ಕಾಣಿಸೋದಿಲ್ಲ. ನಾನೆಲ್ಲಿಗೆ ಹೋಗುತ್ತಿದ್ದೇನೆಂಬುದೂ ಗೊತ್ತಿಲ್ಲ. ನಾನು ಅನಾಥನೂ ಆಗಿರೋದ್ರಿಂದ ನಾನು ಯಾರು–ಏನು ಎಂಬುದೂ ನನಗೆ ತಿಳಿದಿಲ್ಲ' ಮೊಲ ಹೇಳಿತು.

'ಇಟ್ಸ್ ಓಕೆ. ಪರವಾಗಿಲ್ಲ. ನಿಜ ಹೇಳಬೇಕು ಅಂದ್ರೆ ನಾನೂ ನಿನ್ನಂತೆಯೇ. ನನಗೂ ಕಣ್ಣು ಕಾಣೋದಿಲ್ಲ. ನಾನೂ ಅನಾಥ. ನಾನೇನು ಎಂಬುದು ನನಗೂ ಗೊತ್ತಿಲ್ಲ' ಹಾವು ಹೇಳಿತು.

ಸ್ವಲ್ಪ ಹೊತ್ತು ಇಬ್ಬರ ನಡುವೆ ಲೋಕಾಭಿರಾಮ ಮಾತುಕತೆ. ನಂತರ ಹಾವಿಗೊಂದು ಉಪಾಯ ಹೊಳೆಯಿತು.

'ಒಂದು ಕೆಲಸ ಮಾಡ್ತೇನೆ. ನಿನ್ನ ಮೈ ಸವರಿ ನೋಡಿ ನೀನೇನು ಎಂದು ತಿಳಿಯುತ್ತದೆಯೋ ನೋಡ್ತೇನೆ.'

ನಂತರ ಮೊಲದ ಮೈದಡವಿ ಹೇಳಿತು. 'ನಿನ್ನ ಮೈತುಂಬಾ ಮೃದುವಾದ ತುಪ್ಪಳವಿದೆ. ಉದ್ದ ಕಿವಿಗಳಿವೆ. ಮೂಗು ಮೊಂಡಾಗಿದೆ. ಮೆತ್ತಗಿನ ಗಿಡ್ಡ ಬಾಲವಿದೆ. ನನ್ನ ಪ್ರಕಾರ ನೀನು ಮೊಲ. ಹೌದು.. ನೀನು ಮೊಲವೇ.'

ಮೊಲಕ್ಕೆ ಖುಷಿಯಾಯಿತು. 'ಥ್ಯಾಂಕ್ಯೂ ವೆರಿ ಮಚ್. ನನಗೆ ನಂಬೋದಕ್ಕೇ ಆಗ್ತಿಲ್ಲ. ಇವತ್ತು ನನ್ನ ಬದುಕು ಸಾರ್ಥಕವಾಯಿತು. ನಿನ್ನ ಉಪಕಾರ ಯಾವತ್ತೂ ಮರೆಯಲಾರೆ.' ಕುಣಿದು ಕುಪ್ಪಳಿಸಿ ಬಿಟ್ಟಿತು.

'ಬಹುಶಃ ನೀನು ಮಾಡಿದಂತೆ ನಾನೂ ನಿನ್ನ ಮೈದಡವಿ ನೀನ್ಯಾರು ಎಂಬುದನ್ನು ಹೇಳಬಹುದೇನೋ. ಟ್ರೈ ಮಾಡುವೆ.'

ಹಾವು ಒಪ್ಪಿತು. ಮೊಲ ಹಾವಿನ ಮೈಯನ್ನೆಲ್ಲ ಸವರುತ್ತ ಹೇಳಿತು. 'ನೀನು ಬಹಳ ಮೃದು. ಮೈಯೆಲ್ಲ ಬೆಣ್ಣೆಯಂತಿದೆ. ಎಣ್ಣೆ ಹಚ್ಚಿಕೊಂಡಂತೆ ಜಾರುತ್ತಿದೆ. ನಿನಗೆ ಹರಿತ ನಾಲಗೆಯಿದೆ. ಮೈಯಲ್ಲಿ ಮೂಳೆಯೇ ಇಲ್ಲ. ನನ್ನ ಪ್ರಕಾರ, ಒಂದೋ ನೀನು ಟೀಮ್ ಲೀಡರ್ ಆಗಿರಬೇಕು, ಇಲ್ಲಾ ಯಾವುದಾದರೂ ದೊಡ್ಡ ಕಂಪನಿಯಲ್ಲಿ ಎಕ್ಸಿಕ್ಯೂಟಿವ್ ಡೈರೆಕ್ಟರ್ ಅಥವಾ ಆಡಳಿತ ಮಂಡಳಿಯಲ್ಲಿರುವ ಹಿರಿಯ ಅಧಿಕಾರಿಯಾಗಿರಬೇಕು.' ■